(15ನೇ ಪುಟದಿಂದ)

ನಿಮಗೆ 'ಸ್ಲಮ್ ಡಾಗ್ ಮಿಲಿಯೇನರ್' ಸಿನಿಮಾ ನೆನಪಿಗೆ ಬರಬಹುದು. ಅಲ್ಲವೇ?

ಬೆಂಗಳೂರಿನ ಹಳೆ ಏರ್‌ಪೋರ್ಟ್ ರಸ್ತೆಯ ಕೋಡಿಹಳ್ಳಿಯ ಗಲ್ಲಿಯೊಂದರಲ್ಲಿ ಮುನಿಯಪ್ಪರ ಮನೆ ಇದೆ. ಆದರೆ ಈ ಪುಟ್ಟ ಮನೆಗೆ ಬರುವ ಮೊದಲು ಅವರು ಟೆಂಟ್‌ನಲ್ಲಿದ್ದರು. ಅಷ್ಟೊಂದು ಬಡತನ ಅವರದ್ದು. ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಪೊಲಂಬೆಟ್ಟ ಎಂಬ ಊರಿನ ಮುನಿಯಪ್ಪರ ಪೋಷಕರು ಕೆಲಸ ಹುಡುಕಿಕೊಂಡು ಸಿಲಿಕಾನ್ ಸಿಟಿಗೆ ಬರಿಗೈಲಿ ಬಂದಿದ್ದರು. ಉಳಿದುಕೊಳ್ಳಲು ಮನೆ ಕೂಡ ಇರಲಿಲ್ಲ. ಒಂದು ಸ್ಲಮ್ ಏರಿಯಾದಲ್ಲಿ ಟೆಂಟ್ ಹಾಕಿಕೊಂಡು ಜೀವನ ಆರಂಭಿಸಿದರು.

'2003ರಲ್ಲಿ ಚೆನ್ನೈನಲ್ಲಿ ನಡೆದ ಇಂಡೋ ಓಪನ್ ಗಾಲ್ಫ್ ಟೂರ್ನಿಯಲ್ಲಿ ಎರಡನೇ ಸ್ಥಾನ ಪಡೆದೆ. ಅದರಲ್ಲಿ ನನಗೆ 75 ಸಾವಿರ ರೂಪಾಯಿ ಬಹುಮಾನ ಲಭಿಸಿತು. ಕೆಲ ಟೂರ್ನಿಗಳಲ್ಲಿ ಪಾಲ್ಗೊಳ್ಳುತ್ತಾ ಇದ್ದೆ. ಅದರಲ್ಲಿ ಬಂದ ಹಣದಿಂದ ಟೆಂಟ್ ಬಿಟ್ಟು ಬಂದು ಮನೆಯೊಂದನ್ನು ಲೀಸ್‌ಗೆ ತೆಗೆದುಕೊಂಡೆ' ಎನ್ನುತ್ತಾರೆ ಮುನಿಯಪ್ಪ. ಈಗ ಬಂದಿರುವ ಹಣದಿಂದ ಮನೆ ಖರೀದಿಸುವ ಯೋಚನೆ ಹೊಂದಿದ್ದಾರೆ. ಇಲ್ಲಿ ಗೆದ್ದಿರುವುದರಿಂದ ಮುನಿಯಪ್ಪಗೆ ಸಿಂಗಪುರ ಓಪನ್ ಹಾಗೂ ಹಾಂಕಾಂಗ್ ಓಪನ್‌ನಲ್ಲಿ ಆಡಲು ಆಹ್ವಾನ ಸಿಕ್ಕಿದೆ. ಜೊತೆಗೆ ಎರಡು ವರ್ಷ ಏಷ್ಯನ್ ಟೂರ್‌ನಲ್ಲಿ ಆಡಬಹುದು.

**ಚಾಂಪಿಯನ್ ಬೆಳೆದಿದ್ದು ಹೇಗೆ?**

ಉದ್ಯಾನ ನಗರಿಗೆ ಬಂದಾಗ ಮುನಿಯಪ್ಪರ ಅಪ್ಪ-ಅಮ್ಮ ಕರ್ನಾಟಕ ಗಾಲ್ಫ್ ಅಸೋಸಿಯೇಷನ್‌ನಲ್ಲಿ (ಕೆಜಿಎ) ಹಸಿರು ಹುಲ್ಲು ಕತ್ತರಿಸುವ ಕೆಲಸಕ್ಕೆ ಸೇರಿಕೊಂಡರು. ದುಡ್ಡು ಸಾಲದು ಎಂಬ ಕಾರಣಕ್ಕೆ ಮಗನನ್ನೂ ಅಲ್ಲಿಯೇ ಕೆಲಸಕ್ಕೆ ಸೇರಿಸಿದ್ದರು. ಗಾಲ್ಫ್ ಕೋರ್ಸ್‌ನಲ್ಲಿ ಆಡಲು ಬರುತ್ತಿದ್ದ ಗಾಲ್ಫರ್‌ಗಳಿಗೆ ಅವರು 'ಕ್ಯಾಡಿ'ಯಾಗಿದ್ದರು (ಗಾಲ್ಫ್ ಆಟಗಾರರ ಸಹಾಯಕ). ಆದರೆ ಹಣದ ಮುಗ್ಗಟ್ಟಿನ ಕಾರಣ ಕ್ಯಾಡಿ ಕೆಲಸವನ್ನು ಬಿಡಿಸಿ ಹುಲ್ಲು ಕತ್ತರಿಸುವ ಕೆಲಸಕ್ಕೆ ಸೇರಿಸಿದರು. ಇದರಿಂದ ದಿನಕ್ಕೆ 65 ರೂಪಾಯಿ ಸಿಗುತ್ತಿತ್ತು.

ಕ್ಯಾಡಿಯಾಗಿದ್ದ ಸಮಯದಲ್ಲಿ ಗಾಲ್ಫ್ ಕೋರ್ಸ್‌ನ ಕಿಲ್ಪಾಡಿ ಎಂಬವರು ಮುನಿಯಪ್ಪರ ಪ್ರತಿಭೆಯನ್ನು ಗುರುತಿಸಿದ್ದರು. ಅದಕ್ಕಾಗಿ ಮತ್ತೆ ಅವರನ್ನು ಕ್ಯಾಡಿ ಕೆಲಸಕ್ಕೆ ಸೇರಿಸಿದರು. ಆಗ ಮುನಿಯಪ್ಪ ಮರದ ಕೊಂಬೆಗೆ ಮೊಳೆ ಹೊಡೆದು ಗಾಲ್ಫ್ ಕ್ಲಬ್ ಮಾಡಿಕೊಂಡು ಅಭ್ಯಾಸ ಮಾಡುತ್ತಿದ್ದರು. ಬಳಿಕ ಸಣ್ಣ ಪುಟ್ಟ ಟೂರ್ನಿಗಳಲ್ಲಿ ಆಡುತ್ತಾ ಗಾಲ್ಫ್‌ನ ನಾಡಿಮಿಡಿತ ಅರಿತರು. ಅವರಿಗೆ ಕರ್ನಾಟಕ ಗಾಲ್ಫ್ ಕ್ಲಬ್ ಹಾಗೂ ಸದಸ್ಯರು ಹಣದ ಸಹಾಯ ನೀಡಿದರು.

32 ವರ್ಷ ವಯಸ್ಸಿನ ಮುನಿಯಪ್ಪಗೆ ಈಗ ಒಂದು ಗಂಡು ಹಾಗೂ ಒಂದು ಹೆಣ್ಣು ಮಗುವಿದೆ. 'ನನ್ನ ಮಕ್ಕಳು ನನ್ನ ರೀತಿ ಕಷ್ಟ ಪಡಬಾರದು. ಹಾಗಾಗಿಯೇ ಅವರನ್ನು ಚೆನ್ನಾಗಿ ಓದಿಸಬೇಕು ಎಂದು ನಿರ್ಧಾರ ಮಾಡಿದ್ದೇನೆ' ಎನ್ನುತ್ತಾರೆ. ಮುನಿಯಪ್ಪ ಶಾಲೆಯ ಮೆಟ್ಟಿಲು ಹತ್ತಿಲ್ಲ. ಆದರೂ ಇಂಗ್ಲಿಷ್ ಚೆನ್ನಾಗಿ ಮಾತನಾಡುತ್ತಾರೆ. ಅದಕ್ಕೆ ಕಾರಣ ಗಾಲ್ಫ್‌ಗೆಳೆಯರ ಒಡನಾಟ, ಪ್ರವಾಸ.

'ಟೈಗರ್ ವುಡ್ಸ್ ಆಡುವ ಎಲ್ಲಾ ಟೂರ್ನಿಗಳನ್ನು ನಾನು ಟಿ.ವಿ.ಯಲ್ಲಿ ವೀಕ್ಷಿಸುತ್ತೇನೆ. ಅದು ಬೆಳಿಗ್ಗೆ ಮೂರು ಗಂಟೆ ಆಗಿರಲಿ. ಅವರು ನನ್ನ ಹೀರೊ. ನನಗೆ ಮಾತ್ರವಲ್ಲದೇ ಇಡೀ ಗಾಲ್ಫ್‌ಕ್ರೀಡೆಗೆ ದೇವರು' ಎನ್ನುತ್ತಾರೆ ಮುನಿಯಪ್ಪ.

ನಿಜಕ್ಕೂ ಮುನಿಯಪ್ಪ ಸಾಧನೆ ಎಲ್ಲರಿಗೂ ಮಾದರಿ. ಶ್ರೀಮಂತರ ಕ್ರೀಡೆ ಎನಿಸಿದ ಗಾಲ್ಫ್‌ನಲ್ಲಿ ಬಡ ಹುಡುಗನೊಬ್ಬ ಇಷ್ಟು ಎತ್ತರಕ್ಕೆ ಬೆಳೆದು ನಿಂತಿರುವುದು ಯುವಕರಿಗೆ ಸ್ಫೂರ್ತಿ ಕೂಡ.



## ಯಾರೀ ಟೈಗರ್ ವುಡ್ಸ್?

ಟೈಗರ್ ವುಡ್ಸ್ ಕ್ರೀಡಾ ಪ್ರಪಂಚದಲ್ಲಿ ಶ್ರೀಮಂತ ಕ್ರೀಡಾಪಟು ಎನಿಸಿದ್ದಾರೆ. ಅವರ ಒಟ್ಟು ಆದಾಯ ನೂರು ಕೋಟಿ ಡಾಲರ್ (4460 ಕೋಟಿ ರೂಪಾಯಿ) ದಾಟಿದೆ. ಫೋರ್ಬ್ಸ್ ಕಳೆದ ತಿಂಗಳಷ್ಟೇ ಈ ವಿಷಯ ಪ್ರಕಟಿಸಿತ್ತು. ಕಳೆದ ಒಂದೇ ವರ್ಷದಲ್ಲಿ ಅವರು 446 ಕೋಟಿ ರೂಪಾಯಿ ಸಂಪಾದಿಸಿದ್ದರು. ನೈಕ್, ಗ್ಯಾಟೊರೇಡ್, ಜಿಲೆಟ್‌ನಂತಹ ಕಂಪೆನಿಗಳ ರಾಯಭಾರಿ ಆಗಿದ್ದಾರೆ. ಆ್ಯಕ್ಸೆಂಚರ್ ಇವರ ಪ್ರಾಯೋಜಕತ್ವ ವಹಿಸಿಕೊಂಡಿದೆ. ಒಂದು ಗಾಲ್ಫ್ ಕೋರ್ಸ್ ಡಿಸೈನ್ ಮಾಡಿಕೊಟ್ಟರೆ 46 ಕೋಟಿ ರೂಪಾಯಿ ಪಡೆಯುತ್ತಾರೆ! ಎಟಿ ಆ್ಯಂಡ್ ಟಿ ಕಂಪೆನಿಯ ವುಡ್ಸ್ ಬ್ಯಾಗ್ ಮೇಲೆ ತನ್ನ ಲೋಗೊ ಹಾಕಿಕೊಳ್ಳಲು ಒಂದು ವರ್ಷದ ಅವಧಿಗೆ 32 ಕೋಟಿ ರೂಪಾಯಿ ನೀಡಿತ್ತು. ಹಾಗಾಗಿ ಅವರು ಜಗತ್ತಿನಲ್ಲೇ ಅತ್ಯಂತ ಶ್ರೀಮಂತ ಕ್ರೀಡಾಪಟು.

ಅರ್ಜುನ್ ಅತ್ವಾಲ್, ಜ್ಯೋತಿ ರಾಂಧವ ಹಾಗೂ ಮಿಲ್ಕಾ ಸಿಂಗ್ ಭಾರತದ ಶ್ರೇಷ್ಠ ಗಾಲ್ಫರ್‌ಗಳು. ಅವರು ಕೂಡ ವಿಶ್ವದ ವಿವಿಧ ಟೂರ್ನಿಗಳಲ್ಲಿ ಪಾಲ್ಗೊಂಡು ವಿಶ್ವ ಗಾಲ್ಫ್‌ನಲ್ಲಿ ಭಾರತದ ಹೆಸರು ಹರಿದಾಡಲು ಕಾರಣರಾಗಿದ್ದಾರೆ. ಅವರ ಸಂಪಾದನೆಯೂ ಜೋರಾಗಿದೆ!